10. ಈ ಯೋಜನೆಯ ಪ್ರಯೋಜನವು ಮುಖ್ಯವಾಗಿ ಸ್ಥಳೀಯ ಜನರಿಗೆ ಹಾಗೂ ಸಾಮಾನ್ಯ ಕರ್ನಾಟಕದ ಎಲ್ಲಾ ಪ್ರದೇಶಗಳಲ್ಲೂ ದೊರೆಯಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ.

11. ಈ ಯೋಜನೆ ಪೂರ್ವಭಾವೀ ಸಾಧಿತ ವರದಿ ತಯಾರಿಸುವ ಹಂತದಲ್ಲಿದ್ದು, ಮಾದರೀ ಕೈಗಾರಿಕಾ ನಗರದಲ್ಲಿ ಬೇಕಾಗುವ ಜಮೀನು, ಅಲ್ಲಿ ಸ್ಥಾಪಿಸಲ್ಪಡುವ ಕೈಗಾರಿಕೆಗಳ ಬಗ್ಗೆ ವಿವರ ಮುಂತಾದುವುಗಳು ಈಗ ಲಭ್ಯವಿರುವುದಿಲ್ಲ, ಅದೇ ರೀತಿ ಜಪಾನೀ ತಂಡದವರು ಸಹ ವಿವಿಧ ಕೈಗಾರಿಕಾ ಉದ್ಯಮಗಳೊಡನೆ : ಕಂಪನಿಗಳೊಡನೆ ಭಾರತ, ಜಪಾನ್, ಜರ್ಮನಿ ಹಾಗೂ ಅಮೇರಿಕಾ ದೇಶಗಳಲ್ಲಿ ಸಮೀಕ್ಷೆ ನಡೆಸುತ್ತಿರುವುದರಿಂದ ಮೇಲ್ಕಂಡ ಸಮೀಕ್ಷೆ ಹಾಗೂ ಪೂರ್ವಭಾವೀ ಸಾಧ್ಯತಾ ವರದಿ ಯೋಜನೆಯ ನಂತರವೇ ಇತರೆ ವಿವರಗಳು ಲಭ್ಯವಾಗುವುವು.

ವಿಷಯ :- ಶಿಕಾರಿಪುರ ನಗರಕ್ಕೆ ಯು.ಬಿ.ಎಸ್.ಪಿ. ಯೋಜನೆ ಮಂಜೂರಾಗಿದ್ದು, ಈಗ ತಡೆಹಿಡಿದಿರುವುದು.

Q : 102

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92 ಹಾಗೂ 92-93ರಲ್ಲಿ ಶಿಕಾರಿಪುರ ನಗರಕ್ಕೆ ಯು.ಬಿ.ಎಸ್.ಪಿ. ಯೋಜನೆ ಮಂಜೂರಾಗಿ ಹಣ ಬಿಡುಗಡೆ ಮಾಡಿದ್ದು ನಿಜವೇ ? ಹಾಗಿದ್ದಲ್ಲಿ ಈಗ ಕೆಲಸ ಪ್ರಾರಂಭವಾಗಿದೆಯೇ?

ಆ) 1991-92 ಹಾಗೂ 92-93ರಲ್ಲಿ ರಾಜ್ಯದಲ್ಲಿ ಯು.ಬಿ.ಎಸ್.ಪಿ. ಯೋಜನೆ ಯಾವ ನಗರಸಭೆ ಪುರಸಭೆಗಳಿಗೆ ಮಂಜೂರಾಗಿತ್ತು? ಯಾವ ಯಾವ ಸ್ಥಳಗಳಲ್ಲಿಸದರಿ ಮಂಜೂರಾತಿಯನ್ನು ರದ್ದುಪಡಿಸಲಾಗಿದೆ ಹಾಗೂ ಅದಕ್ಕೆ ಕಾರಣವೇನು?

ಇ) ಈ ರದ್ದಾಗಿರುವ ಸ್ಥಳಗಳಲ್ಲಿ 1993-94ರಲ್ಲಿ ಈ ಯೋಜನೆ ಕೈಗೊಳ್ಳಲಾಗುವುದೇ?

ಶ್ರೀ ಚೌಡರೆಡ್ಡಿ ( ನಗರಾಭಿವೃದ್ಧಿ ಸಚಿವರು) :

ಅ) ಹೌದು. ಈ ಯೋಜನೆಯ ಕಾರ್ಯಕ್ರಮ ಪಟ್ಟಿಯು ಇನ್ನೂ ಅಂತಿಮವಾಗದಿರುವುದರಿಂದ ಕೆಲಸ ಪ್ರಾರಂಭವಾಗಿರುವುದಿಲ್ಲ.

ಆ) ಯು.ಬಿ.ಎಸ್.ಪಿ. ಯೋಜನೆಯನ್ನು ಮಂಜೂರು ಮಾಡಿರುವ ನಗರಗಳು :

1. ಬೆಂಗಳೂರು ಮಹಾನಗರ ಪಾಲಿಕೆ
2. ಬಳ್ಳಾರಿ
3. ಹೊಸಪೇಟೆ
4. ದಾವಣಗೆರೆ

5. ಚಿಂತಾಮಣಿ
6. ಬಿಜಾಪುರ
7. ಚಾಮರಾಜನಗರ
8. ರಾಯಚೂರು
9. ಗಂಗಾವತಿ
10. ಕೊಪ್ಪಳ
11. ಶಹಾಬಾದ್

ಈ ಕೆಳಕಂಡ ಹೆಚ್ಚುವರಿ ನಗರಗಳಲ್ಲಿ ಉಳಿತಾಯದ ಹಣದಿಂದ ಪ್ರಾರಂಭಿಸಲು ಉದ್ದೇಶಿಸಿದೆ.

1. ಹಾಸನ
2. ಮಂಡ್ಯ
3. ಕೋಲಾರ
4. ಬೀದರ್
5. ಹರಿಹರ
6. ಕೊಳ್ಳೇಗಾಲ
7. ಮುಳಬಾಗಿಲು
8. ಶಿಕಾರಪುರ

ಉಳಿತಾಯದಿಂದ ಯು.ಬಿ.ಎಸ್.ಪಿ. ಯೋಜನೆಯನ್ನು ರದ್ದು ಪಡಿಸಲಾದ ನಗರಗಳು :

1. ಸೇಡಂ (ಸೂಕ್ತ ಕೊಳಚೆ ನಿವಾಸಿಗಳ ಸಂಖ್ಯೆ ಸಾಕಷ್ಟು ದೊರೆಯದಿರುವುದರಿಂದ)

ಇ) ಹೌದು. ಅಗತ್ಯ ಕೊಳಚೆ ನಿವಾಸಿಗಳ ಸಂಖ್ಯೆ ದೊರೆತಲ್ಲಿ ಕೈಗೊಳ್ಳಲಾಗುವುದು.

ವಿಷಯ :- ಉದ್ಯೋಗ ಮಿತ್ರ ಯೋಜನೆ.

Q : 367

ಶ್ರೀ ಬಿ. ರಾಜುಗೌಡ ( ಹನೂರು) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕರ್ನಾಟಕ 'ಉದ್ಯೋಗ ಮಿತ್ರ' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆಯೇ?

ಆ) ಅದು ಯಾವಾಗ ಜಾರಿಗೆ ಬಂದಿದೆ ಹಾಗೂ ಅದರ ಕಾರ್ಯ ವೈಖರಿಯೇನು?

ಇ) ವಿಶ್ವ ಯೋಜನೆ ಕೆಳಗೆ ಎಷ್ಟು ಜನ ಅರ್ಹ ಅಂಗವಿಕಲರಿಗೆ ,ವಿಧವಾ ವೇತನದಾರರಿಗೆ, ಸೂಕ್ತ ತರಬೇತಿ ನೀಡಲಾಗಿದೆ?

ಶ್ರೀ ಸಿ. ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಹೌದು.